RNU AIR DHARWAD

JULY 06, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

- **ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣ ಉದ್ದಿಮೆ ಯೋಜನೆ; ರಾಜ್ಯಕ್ಕೆ 493 ಕೋಟಿ ರೂಪಾಯಿ, ಅನುದಾನ.**

- **ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ಮಂತ್ರಾಲಯ; ರಾಜ್ಯದ ಐದು ಬ್ರ್ಯಾಂಡಿಂಗ್ ಪ್ರಸ್ತಾವಗಳಿಗೆ, ಅನುಮೋದನೆ.**

- **ಅಂತಾರಾಜ್ಯ ನದಿ ನೀರು ಹಂಚಿಕೆ ವಿವಾದ; ಶೀಘ್ರ ನ್ಯಾಯದಾನಕ್ಕಾಗಿ, ಕೇಂದ್ರ ನ್ಯಾಯ ಮಂಡಳಿಯಲ್ಲಿ, ಹಲವು ಪೀಠಗಳು.**

- **ಇಂದು, ಅಶೂರ–ಎ–ಮೊಹರಂ; ಶ್ರದ್ಧೆಯಿಂದ ನಾಡಿನಾದ್ಯಂತ ಆಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆ – ಪಿ.ಎಂ.ಎಫ್.ಎಂ.ಇ. ಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆಯಡಿ, ಮುಂದಿನ 5 ವರ್ಷಗಳಲ್ಲಿ, 493 ಕೋಟಿ ರೂಪಾಯಿ ಕೇಂದ್ರ ನೀಡಲಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮಾತನಾಡಿದ ಸಚಿವರು, ರಾಜ್ಯದಲ್ಲಿ 11 ಸಾವಿರದ 9 ನೂರಾ 10, ಕಿರು ಆಹಾರ ಸಂಸ್ಕರಣಾ ಉದ್ಯಮಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದರು. ಪಿ.ಎಂ.ಎಫ್.ಎಂ.ಇ. ಯೋಜನೆಯಡಿ, ಕಳೆದ 5 ವರ್ಷಗಳಲ್ಲಿ, 6 ಸಾವಿರದ 6 ನೂರಾ 98 ಅರ್ಜಿಗಳಿಗೆ, ಸಾಲ ಮಂಜೂರಾಗಿದೆ. 785 ಕೋಟಿ 48 ಲಕ್ಷ ರೂಪಾಯಿ ಬಂಡವಾಳ, ಕಿರು ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಹೂಡಿಕೆಯಾಗಿದೆ. 162 ಕೋಟಿ 50 ಲಕ್ಷ ರೂಪಾಯಿ ಸಹಾಯ ಧನವನ್ನು, 4 ಸಾವಿರದ 4 ನೂರಾ 89 ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು, ಸಚಿವ ಚಲುವರಾಯಸ್ವಾಮಿ ಹೇಳಿದರು.**

<><><>

**ಕೇಂದ್ರದ ಆಹಾರ ಸಂಸ್ಕರಣಾ ಕೈಗಾರಿಕೆಗಳ ಮಂತ್ರಾಲಯ, ರಾಜ್ಯದ ಐದು ಬ್ರ್ಯಾಂಡಿಂಗ್ ಪ್ರಸ್ತಾವಗಳನ್ನು ಅನುಮೋದಿಸಿದೆ. ಕರ್ನಾಟಕ ರಾಜ್ಯ ದ್ವಿ ದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ಸಲ್ಲಿಸಿದ, ಬ್ರ್ಯಾಂಡ್–1 'BHIMA', ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಸಾವಯವ ಕೃಷಿಕರ ಸಹಕಾರ ಒಕ್ಕೂಟದಿಂದ, ಬ್ರ್ಯಾಂಡ್ –2, 'SEEMI', ಕಾಫಿ ಬೋರ್ಡ್‌ನ**

ಬ್ರ್ಯಾಂಡ್ –3, ಇಂಡಿಯಾ ಕಾಫಿ, ಬ್ರ್ಯಾಂಡ್–4) K.O.F.C ಸಫಲ್, ನೆಲಸಿರಿ ರೈತ ಉತ್ಪಾದಕರ ಕಂಪೆನಿ ಸಲ್ಲಿಸಿದ, ಬ್ರ್ಯಾಂಡ್ –5 ನೆಲಸಿರಿಗೆ ಅನುಮೋದನೆ, ದೊರೆತಿದೆ.

<><><>

ಪಿ.ಎಂ.ಎಫ್.ಎಂ.ಇ. ಯೋಜನೆಯಡಿ, 12 ಕೋಟಿ 79 ಲಕ್ಷ ರೂಪಾಯಿ ಯೋಜನಾ ವೆಚ್ಚದೊಂದಿಗೆ, ಮಂಡ್ಯ, ದಾವಣಗೆರೆ, ಬೆಳಗಾವಿ ಹಾಗೂ ಉತ್ತರಕನ್ನಡದಲ್ಲಿ 4 ಸಾಮಾನ್ಯ ಮೂಲಸೌಕರ್ಯ ಘಟಕಗಳನ್ನು ಸ್ಥಾಪಿಸಲಾಗಿದೆ. 14 ಇನ್‌ಕ್ಯುಬೇಶನ್ ಕೇಂದ್ರಗಳನ್ನು ರಾಜ್ಯಕ್ಕೆ, ಕೇಂದ್ರ ಮಂಜೂರು ಮಾಡಿದೆ.

<><><>

ವಿಜಯಪುರ ಮತ್ತು ಕು ್ಟಗಿಯಲ್ಲಿ ಹಾಗೂ ಬೀದರಿನ ಹುಮನಾಬಾದ್ ನಲ್ಲಿ ದ್ರಾಕ್ಷಿ, ದಾಳಿಂಬೆ, ನಿಂಬೆ ತೋಟಗಾರಿಕೆ ಸಂಸ್ಕರಣೆ ಹಾಗೂ ರಫ್ತಿನ ಅನುಕೂಲಕ್ಕಾಗಿ, ಸಮಗ್ರ ಶೀತಲ ಸರಪಳಿ ಘಟಕಗಳು ಕಾರ್ಯಾಚರಣೆಯಲ್ಲಿವೆ.

<><><>

ಹುಬ್ಬಳ್ಳಿಯ ಎ.ಪಿ.ಎಂ.ಸಿ ಆವರಣದಲ್ಲಿ, 6 ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ ಗೊದಾಮು, ಕಾರ್ಯಚರಣೆಗೆ ಸಿದ್ಧವಾಗಿದೆ.

<><><>

'ನಿಸರ್ಗಾಧಾರಿತ ಶಾಶ್ವತ ಪರಿಹಾರಗಳ ಮೂಲಕ, ಸಮುದಾಯದೆಡೆಗೆ' ಧ್ಯೇಯದೊಂದಿಗೆ, ಧಾರವಾಡದ ನಿಸರ್ಗ ಸಂಶೋಧನಾ ಕೇಂದ್ರ, ರೈತರಿಗಾಗಿ ಮಳೆ ನೀರು ಕೊಯ್ಲು, ಕೊಳವೆ ಬಾವಿ ಮರುಪೂರಣ ಹಾಗೂ ಮಣ್ಣು ಮತ್ತು ನೀರಿನ ಹೊಂದಾಣಿಕೆ ಬಗ್ಗೆ, ಪ್ರಾತ್ಯಕ್ಷಿಕೆ ಕಾರ್ಯಾಗಾರವನ್ನು, ಧಾರವಾಡ ಜಿಲ್ಲೆ ಹಳ್ಳಿಗೇರಿಯ, ಪರಿಸರ ಶಿಕ್ಷಣ ಪಾಠಶಾಲೆ, ನೇಚರ್ ಫಸ್ಟ್ ಇಕೋ ವಿಲೇಜ್‌ನಲ್ಲಿ ಆಯೋಜಿಸಿತ್ತು. ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ, ಜಲ ಸಂರಕ್ಷಣಾ ತಜ್ಞ, ಹುಬ್ಬಳ್ಳಿಯ ಸಂಕಲ್ಪ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಸಿ.ಇ.ಒ., ಸಿಕಂದರ್ ಮೀರ್‌ನಾಯಕ್, ಪ್ರಾತ್ಯಕ್ಷಿಕೆ ಮೂಲಕ, ಮಳೆ ನೀರು ಕೊಯ್ಲಿನ ಮಹತ್ವ ವಿವರಿಸಿದರು. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಸಿಕಂದರ್ ಮೀರ್‌ನಾಯಕ್ ಧ್ವನಿ 30 ಸೆಕೆಂದುಗಳು

<><><>

ವಿದ್ಯಾರ್ಥಿಗಳಲ್ಲಿ ಹವಾಮಾನ ವೈಪರೀತ್ಯದ ಕುರಿತು, ಜಾಗೃತಿ ಮೂಡಿಸಿ, ಉತ್ತಮ ಪರಿಸರ ನಿರ್ಮಿಸುವಲ್ಲಿ, ಭಾಗೀದಾರರನ್ನಾಗಿಸುವ ಉದ್ದೇಶವನ್ನು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ವಿಭಾಗ ಹೊಂದಿದೆ ಎಂದು, ವಿಶೇ ' ಆಯುಕ್ತರಾದ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ. ಬಿ.ಬಿ.ಎಂ.ಪಿ. ನೌಕರರ ಭವನದಲ್ಲಿ, ಬೆಂಗಳೂರು ಹವಾಮಾನ ಕ್ರಿಯಾ ಬಳಗಗಳ, ಸಮ್ಮಿಲನ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಇದು ವರೆಗೆ 700 ಕ್ಕೂ ಹೆಚ್ಚು, ಸರ್ಕಾರಿ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಹೆಸರು ನೋಂದಾಯಿಸಿವೆ. 73 ಸಂಸ್ಥೆಗಳಲ್ಲಿ, ಹವಾಮಾನ ಕ್ರಿಯಾ ಬಳಗವನ್ನು ರಚಿಸಲಾಗಿದೆ ಎಂದರು.

<><><>

ಚಿಕ್ಕಮಗಳೂರು ಜಿಲ್ಲೆಯ, ಕಡೂರು, ಬೀರೂರು ಹಾಗು ತರೀಕೆರೆ ರೈಲು ನಿಲ್ದಾಣಗಳನ್ನು, ಅಮೃತ ಭಾರತ ಯೋಜನೆಯಡಿ, ಮೇಲ್ದರ್ಜೆಗೇರಿಸಲಾಗುವುದು ಎಂದು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಬೀರೂರು ರೈಲು ನಿಲ್ದಾಣಕ್ಕೆ ಭೇಟಿ ನೀಡಿ, ಅವರು ಪರಿಶೀಲಿಸಿದರು.

<><><>

ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಎಂ.ಸಿ.ಸುಧಾಕರ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಅಜಯ್ ಸಿಂಗ್, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, 2025-26ನೇ ಸಾಲಿನ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ, ಕ್ರಿಯಾಯೋಜನೆ ಕುರಿತು, ಮಾಹಿತಿ ನೀಡಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(1 ನಿ. 4 ಸೆ.)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಅಂತಾರಾಜ್ಯ ನದಿಗಳ ನೀರು ಹಂಚಿಕೆ ವಿವಾದಗಳನ್ನು, ಕಾಲಮಿತಿಯಲ್ಲಿ ಬಗೆಹರಿಸಲು, ಕೇಂದ್ರ ನ್ಯಾಯ ಮಂಡಳಿ – ಟ್ರಿಬ್ಯುನಲ್‌ನಲ್ಲಿ, ಸಾಕಷ್ಟು ಪೀಠಗಳನ್ನು ಸಕಾಲಿಕ ಹಾಗೂ ಶೀಘ್ರ ನ್ಯಾಯದಾನಕ್ಕಾಗಿ, ಕೇಂದ್ರ ಸರ್ಕಾರ ಸ್ಥಾಪಿಸಿದೆ ಎಂದು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿ, ಮಾತನಾಡಿದ ಸಚಿವರು, ಕಾನೂನಿನಲ್ಲಿ ಸಹ ಸಾಕಷ್ಟು ಬದಲಾವಣೆ ತರಲಾಗಿದೆ. ಟ್ರಿಬ್ಯುನಲ್‌ನಲ್ಲಿ ಶೀಘ್ರಗತಿಯಲ್ಲಿ ಆದೇಶ ಪ್ರಕಟಗೊಳ್ಳಲು, ಕ್ರಮ ವಹಿಸಲಾಗಿದೆ. ಇಲ್ಲಿ ಪ್ರಕಟವಾಗುವ ತೀರ್ಪು ಅಂತಿಮ. ಎರಡೂ ರಾಜ್ಯಗಳಿಗೂ ಅನ್ವಯವಾಗುತ್ತದೆ, ಎಂದರು.

<><><>

ಹಾವೇರಿ ಜಿಲ್ಲೆ, ಸವಣೂರ ತಾಲೂಕು ಚಳ್ಳಾಳ ಗ್ರಾಮದಲ್ಲಿ, ಕೇಂದ್ರ ಪುರಸ್ಕೃತ, ಆರೋಗ್ಯ ಮಿ ’ನ್ ಯೋಜನೆ ಅಡಿ, ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು, ಸಚಿವ ಜೋಶಿ ಉದ್ಘಾಟಿಸಿದರು.

<><><>

ದೇಶದ ವಿವಿಧ ಭಾಗಗಳಲ್ಲಿ ಹಾಗೂ ರಾಜ್ಯಾದ್ಯಂತ ಇಂದು, ಅಶೂರ-ಎ-ಮೊಹರಂ ಗೌರವ ಮತ್ತು ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ಕರ್ಬಲಾದಲ್ಲಿ ಸತ್ಯ, ಸದಾಚಾರ ಮತ್ತು ನ್ಯಾಯವನ್ನು ಎತ್ತಿ ಹಿಡಿಯಲು ತಮ್ಮ ಪ್ರಾಣವನ್ನೇ ಅರ್ಪಿಸಿದ, ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಮತ್ತು ಅವರ ಸಹಚರರ ಪ್ರಾಣಾರ್ಪಣೆಯನ್ನು, ಈ ದಿನ ಸೂಚಿಸುತ್ತದೆ. ತಾಜಿಯಾ ಮೆರವಣಿಗೆ, ಕರ್ಬಲಾ ಘಟನೆಯ ವಿವಿಧ ಅಂಶಗಳನ್ನು, ಉಲೇಮಾಗಳು ಪ್ರದರ್ಶಿಸುವ ಮಜ್ಲಿಸ್ ಅಥವಾ ಧಾರ್ಮಿಕ ಸಭೆಗಳು ಸಹ ಆಯೋಜನೆಗೊಂಡಿವೆ.

<><><>

ಕರ್ನಾಟಕದ ಮೊಹರಂ ಆಚರಣೆ ವೈಶಿಷ್ಟ್ಯದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿಜಯನಗರ ಜಿಲ್ಲೆ, ಹೊಸಪೇಟೆಯ ಖ್ಯಾತ ಚಿಂತಕ, ‘ಕರ್ನಾಟಕದ ಮೊಹರಂ’ ಕೃತಿಕಾರ, ಪ್ರೊಫೆಸರ್ ರಹಮತ್ ತರೀಕೆರೆ.

<><><>

ಪ್ರೊ. ರಹಮತ್ ತರೀಕೆರೆ ಧ್ವನಿ 50 ಸೆಕೆಂದುಗಳು

<><><>

ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ, ವಿಶ್ವ ಅಥ್ಲೆಟಿಕ್ಸ್ NeerajChopraClassic2025 ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ, 11 ಜನ ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಒಡ್ಡಿದ ಸ್ಪರ್ಧೆಯಲ್ಲಿ, ಒಲಿಂಪಿಯನ್ ಭಾರತದ ನೀರಜ್ ಚೋಪ್ರಾ, ಚಿನ್ನದ ಪದಕ ಗೆದ್ದರು. 86 ದಶಾಂಶ 1–8 ಮೀಟರ್ ದೂರಕ್ಕೆ ಭರ್ಚಿ ಎಸೆಯುವ ಮೂಲಕ, ಚಾಂಪಿಯನ್ ಪಟ್ಟ ಅಲಂಕರಿಸಿದರು. ಕೀನ್ಯಾದ ಜೂಲಿಯೆಸ್ 84 ದಶಾಂಶ 5–1 ಮೀಟರ್ ಜಾವೆಲಿನ್ ಎಸೆದು, ಬೆಳ್ಳಿ ಪದಕ ಹಾಗೂ ಶ್ರೀಲಂಕಾದ ರುಮೇಶ ಪಥಿರ 84 ದಶಾಂಶ 3–4 ಮೀಟರ್ ಭರ್ಚಿ ಎಸೆದು, ಕಂಚಿನ ಪದಕಕ್ಕೆ ಭಾಜನರಾದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸೇರಿದಂತೆ, 14 ಸಾವಿರ ಪ್ರೇಕ್ಷಕರು ಪಾಲ್ಗೊಂಡು, ಸ್ಪರ್ಧೆಯ ಮೆರಗು ಹೆಚ್ಚಿಸಿದರು.

<><><>